ದಿನಾಂಕ 13.07.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. PSR ವಕೀಲರಿಂದ:**

ನಿಪಿ-26 ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಿ , ಅದರಲ್ಲಿ ಸರ್ಕಾರ ಪೋಡಿಗಳನ್ನು ರದ್ದುಪಡಿಸಿ ಸರ್ವೆ ನಂ. 56 ರಲ್ಲಿ ಒಟ್ಟು ಜಮೀನನ್ನು ಗೋಮಾಳವಾಗಿ ಆದೇಶ ಮಾಡಲಾಗಿದೆ ಎಂದರೆ ಸರಿ . ನೀವು ನ್ಯಾಯಾಲಯಕ್ಕೆ ಸರ್ವೆ ನಂ. 56 ರ ಎಲ್ಲಾ RTC ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ ಹೆಸರಿನಲ್ಲಿರುವ RTC ಯನ್ನು ಮಾತ್ರ ನ್ಯಾಯಾಲಯಕ್ಕೆ ಹಾಜರಪಡಿಸಿರುವುದಾಗಿ ನುಡಿಯುತ್ತಾರೆ.

ನಿಪಿ-27 ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ಮ್ಯೂಟೇಷನ್ ಆಗಿದೆ ಎಂದರೆ ಸಾಕ್ಷಿದಾರರು ನಮ್ಮ ತಂದೆಯ ಹೆಸರಿನಲ್ಲಿ ತಪ್ಪಾಗಿ ಆಗಿರುವುದಾಗಿ ನುಡಿಯುತ್ತಾರೆ. ನಿಪಿ-24 MR 9/2017-18 ಆಗುವಾಗ ನಾನು ತಕರಾರು ಮಾಡಿರುತ್ತೇನೆ. ನಿಪಿ-23 ರಿಂದ 35 ರ ದಾಖಲೆಗಳನ್ನು ನ್ಯಾಯಾಲಯಕ್ಕೆ ದಾವೆ ಹಾಕುವ ಸಮಯದಲ್ಲಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ . ನಿಪಿ-32 ಅನ್ನು ನಾನೇ ತೆಗೆದಿರುತ್ತೇನೆ. ನಿಪಿ-32 ರಲ್ಲಿ ಕಾಣುತ್ತಿರುವುದು ಕೆರೆಯ ಏರಿ ಎಂದರೆ ಸರಿ . ಸದರಿ ಕೆರೆ ಏರಿಯ ಮೇಲೆ ದಾರಿ ಇದೆ ಎಂದರೆ ಸರಿ . ನಿಪಿ-32 ಅನ್ನು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-*34 ಮತ್ತು 35 ಅನ್ನು ಪ್ರತಿವಾದಿಗಳು ಯಾವುದೇ ಗಲಾಟೆ ಮಾಡದಿದ್ದರೂ ಸಹ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-23 ರಿಂದ 37 ಅನ್ನು ಈ ದಾವೆಗಾಗಿ

ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿಗೆ ಯಾವುದೇ ತೊಂದರೆ ಕೊಡದಿದ್ದರೂ ಸಹ ಸುಳ್ಳು ದೂರನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ